> **ಈ ಹೊಸ ರೋಗದ ಹೆಸರಿನಲ್ಲಿ ಜನ ಹರಕೆಗಳನ್ನು ಹೊರುತ್ತಿರುವುದು, ಮತ್ತು ನಿಷೇಧವಿದ್ದರೂ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿ ಅರ್ಪಿಸುವ ಭಯ ಕಾಡುತ್ತಾ ಇದೆ. ನಾವು ಎಚ್ಚರಿಕೆಯಿಂದ ಇದ್ದು ಯಾವುದೇ ಹೆಣ್ಣುಮಗುವನ್ನೂ ದೇವದಾಸಿಯನ್ನಾಗಿಸದಂತೆ ಕಾಯಬೇಕಿದೆ**
>
> **-ಶೋಭಾ ಗಸ್ತಿ,** ಸಾಮಾಜಿಕ ಕಾರ್ಯಕರ್ತೆ



ಕಳೆದುಕೊಂಡವರು ಹತಾಶರಾಗುವುದು ತೀರಾ ಸಹಜ. ದೊಡ್ಡವರ ಪರಿಸ್ಥಿತಿ ಹಾಗಾದರೆ ಅದರ ಪ್ರಭಾವ ಮಕ್ಕಳ ಮೇಲೆ ಹರಿದು ಬರುತ್ತದೆ. ಮಕ್ಕಳನ್ನೂ ಒಳಗೊಂಡಂತೆ ವಯಸ್ಕರೆಲ್ಲರಿಗೆ ಅನೌಪಚಾರಿಕವಾಗಿ ಆಪ್ತಸಮಾಲೋಚನೆಯ ಅವಕಾಶಗಳು ಮತ್ತು ವಯಸ್ಕರಿಗೆ ಉದ್ಯೋಗಗಳ ಮೂಲಕ ಸಂಪಾದನೆಗೆ ಅವಕಾಶಗಳನ್ನು ಮಾಡಿಕೊಡಬೇಕಿರುವುದು ಈಗಿನ ತುರ್ತು.

ಕೋವಿಡ್ ವಿರುದ್ಧದ ಲಸಿಕೆ ದೇಶದ ಎಲ್ಲ ವೃದ್ಧರನ್ನು, ಮಧ್ಯವಯಸ್ಕರನ್ನು ದಾಟಿ, ಯುವಜನರಿಗೂ ತಲುಪಿ ಮಕ್ಕಳ ಮಟ್ಟಕ್ಕೆ ಬರಲು ಅದಿನ್ನೆಷ್ಟು ಕಾಲ ಆಗುವುದೋ ಎಂದು ಅಂದಾಜಿಸಲು ಇನ್ನೂ ಸಾಧ್ಯವಾಗಿಲ್ಲ. ಆದರೆ ಈಗಾಗಲೇ ಕೊರೊನಾ ಸೋಂಕಿತರಲ್ಲಿ 20 ವರ್ಷದೊಳಗಿನವರ ಪ್ರಮಾಣ ಶೇ 12 ಎಂಬುದನ್ನು ಯಾವ ದೃಷ್ಟಿಕೋನದಲ್ಲಿ ತೆಗೆದುಕೊಳ್ಳಬೇಕೊ ಸ್ಪಷ್ಟವಾಗುತ್ತಿಲ್ಲ. ಇಂತಹ ಸಮಯದಲ್ಲಿ ಇಡೀ ಸಮಾಜ 'ಮಕ್ಕಳನ್ನು ಹಕ್ಕುಗಳಿರುವ ಪ್ರಜೆಗಳು' ಎಂಬುದನ್ನು ಗಮನಕ್ಕೆ ತೆಗೆದುಕೊಂಡು ಸಂಕಷ್ಟಕ್ಕೀಡಾಗಬಲ್ಲ ಮೂಲೆಗುಂಪಾದ ಜಾತಿ ವರ್ಗಗಳು, ಅಲ್ಪಸಂಖ್ಯಾತರ ಮಕ್ಕಳಿಗೆ ಯಾವುದೇ ತಾರತಮ್ಯ ಮಾಡದೆ ಅವರ ಉಳಿವು, ಆರೋಗ್ಯ, ರಕ್ಷಣೆಯ ಹಕ್ಕುಗಳನ್ನು ಆದ್ಯತೆಯಾಗಿಸಬೇಕಿದೆ.

## ಜಂಟಿ ಪ್ರಯತ್ನ

2020ರಲ್ಲಿ ಕೊರೊನಾ ಸಾಂಕ್ರಾಮಿಕವಾಗುತ್ತಿದ್ದಂತೆಯೇ ಸರ್ಕಾರದ ಪ್ರಯತ್ನಗಳೊಂದಿಗೆ ನೂರಾರು ಸ್ವಯಂಸೇವಾ ಸಂಘಟನೆಗಳು ತಾವೇತಾವಾಗಿ ಮುಂದಾಗಿ ಪರಿಹಾರ ಕಾರ್ಯಕ್ರಮಗಳಲ್ಲಿ ತೊಡಗಿದವು. ಅದರಲ್ಲಿ ಆಹಾರ ವಿತರಣೆ, ತಂಗುದಾಣಗಳ ನಿರ್ಮಾಣವಷ್ಟೇ ಅಲ್ಲದೆ ಮನೋಸ್ವಾಸ್ಥ್ಯ ಆರೈಕೆ, ಆಪ್ತಸಮಾಲೋಚನೆಯನ್ನೂ ಒದಗಿಸುವಲ್ಲಿ ಹಲವಾರು ಸ್ವಯಂಸೇವಕರು ಮತ್ತು ವೃತ್ತಿ ಪರಿಣತರು ಮುಂದಾದರು. ಕೇಂದ್ರ ಸರ್ಕಾರ ಮತ್ತು ನೀತಿ ಆಯೋಗ ಸ್ವಯಂಸೇವಾ ಸಂಘಟನೆಗಳನ್ನು ಕೋವಿಡ್ ವಿರುದ್ಧದ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಈಗ ಹೇಳುತ್ತಿದೆ.

ಕಳೆದೆರಡು ತಿಂಗಳಿಂದ ಚೈಲ್ಡ್‌ಲೈನ್ 1098 ಹಾಗೂ ಇತರ ಸ್ವಯಂಸೇವಾ ಸಂಘಟನೆಗಳಿಗೆ ಬಂದ ದೂರುಗಳು ಮಕ್ಕಳ ಮೇಲೆ ಬೀಳುತ್ತಿರುವ ಒತ್ತಡಗಳ ಚಿತ್ರಣವನ್ನು ಎದುರಿಟ್ಟವು. ಆಗಲೇ ಹಿರಿಯ ಐ.ಎ.ಎಸ್. ಅಧಿಕಾರಿಗಳಾದ ಉಮಾ ಮಹದೇವನ್, ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಾದ ಪಲ್ಲವಿ ಆಕುರಾತಿಯವರ ನೇತೃತ್ವದಲ್ಲಿ ಕಾರ್ಯಪಡೆಯೊಂದು ಆರಂಭವಾಯಿತು. ಇದರ ಉದ್ದೇಶ ರಾಜ್ಯದಲ್ಲಿ ಕೊರೊನಾ ಹಾವಳಿಯಿಂದ ಸಂಕಷ್ಟಕ್ಕೆ ಈಡಾಗಿರುವ ಮಕ್ಕಳನ್ನು ಗುರುತಿಸಿ ನೆರವು ನೀಡುವುದು ಮತ್ತು ಮುಂದಿನ ದಿನಗಳಲ್ಲಿ ಕೊರೊನಾ ಕಾರಣ ನೇರ ಅಥವಾ ಪರೋಕ್ಷ ಬಾಧೆಗೊಳಗಾಗುವ ಮಕ್ಕಳಿಗೆ ನೆರವನ್ನು ನೀಡುವುದು.

ಇದೇ ಸಮಯದಲ್ಲಿ ಕೊರೊನಾದಿಂದ ಅನಾಥರಾಗಿರುವ ಅಥವಾ ಕೊರೊನಾ ಸೋಂಕಿನಿಂದ ಭಯಭೀತರಾಗಿ ಹತಾಶೆಗೊಂಡು ಆತ್ಮಹತ್ಯೆ ಮಾಡಿಕೊಂಡ ಪೋಷಕರ ಮಕ್ಕಳನ್ನು ಕುರಿತು ಅನೇಕ ಸುದ್ದಿಗಳು ಹರಿದಾಡತೊಡಗಿದವು. ಕರ್ನಾಟಕ ಸರ್ಕಾರ ತಕ್ಷಣವೇ ಇದಕ್ಕೆ ಪ್ರತಿಕ್ರಿಯಿಸಿ, ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳಿಗೆ ಆದ್ಯತೆ ಮೇರೆಗೆ ನೆರವು ನೀಡಲು ಮುದ್ರಾಂಕ ಆಯುಕ್ತರಾದ ಕೆ.ಪಿ. ಮೋಹನ್‌ರಾಜ್ ಅವರನ್ನು ರಾಜ್ಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿತು. ಅವರ ನೇತೃತ್ವದಲ್ಲಿ ಸರ್ಕಾರದ ಅಧಿಕಾರಿಗಳು ಮತ್ತು ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳು ಸಭೆಗಳನ್ನು ನಡೆಸಿ, ಮಕ್ಕಳ ಸಮಸ್ಯೆಗಳು ಮತ್ತು ಅಗತ್ಯಗಳನ್ನು ಗಮನಿಸಲು ಮತ್ತು ಕಾರ್ಯಪ್ರವೃತ್ತರಾಗಲು ಈಗಾಗಲೇ ಕ್ರಿಯಾತಂತ್ರಗಳನ್ನು ರೂಪಿಸುತ್ತಿದ್ದಾರೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಮಗುವಿನ ಹಕ್ಕುಗಳಿಗೆ ಚ್ಯುತಿ ಬಾರದಂತೆ ಕ್ರಮ ಕೈಗೊಳ್ಳಲು ಮತ್ತು ಯಾವುದೇ ಮಗು ಅನಧಿಕೃತವಾಗಿ ದತ್ತು ಹೋಗದಂತೆ ಅಥವಾ ಮಾರಾಟವಾಗದಂತೆ ತಡೆಯುವುದೂ ಕೂಡ ಇದರ ಉದ್ದೇಶವಾಗಿದೆ. ಸದ್ಯದ ಕಾರ್ಯಸೂಚಿಯ ಅಂಶಗಳು ಹೀಗಿವೆ:

- 18 ವರ್ಷದೊಳಗಿನ ಮಕ್ಕಳಿಗಾಗಿ ತಾತ್ಕಾಲಿಕ ತಂಗುದಾಣಗಳ ನಿರ್ಮಾಣ. ಸೋಂಕಿಗೊಳಗಾದ ಮಕ್ಕಳಿಗೆ ಪ್ರತ್ಯೇಕವಾದ ಆರೈಕೆ ಕೇಂದ್ರಗಳ ನಿರ್ಮಾಣ.
- ಹೆಣ್ಣುಮಕ್ಕಳು ಮತ್ತು ಅಂಗವೈಕಲ್ಯ ಇರುವ ಮಕ್ಕಳಿಗಾಗಿ ವಿಶೇಷವಾದ ಗಮನ.
- ಮಕ್ಕಳೊಂದಿಗೆ ಆಪ್ತಸಮಾಲೋಚನೆ ನಡೆಸಬಲ್ಲ ಮತ್ತು ಸಂಕಷ್ಟದಲ್ಲಿರುವ ಮಕ್ಕಳಿಗೆ ನೆರವು ನೀಡಬಲ್ಲ ಸ್ವಯಂಸೇವಕರ ತಂಡಗಳ ರಚನೆ (ಸ್ವಯಂಸೇವಕರ ಹಿನ್ನೆಲೆ ಪರಿಶೀಲಿಸಿ ತೆಗೆದುಕೊಳ್ಳಲಾಗುತ್ತದೆ).
- ಮಕ್ಕಳಿಗಾಗಿ ಎಲ್ಲೆಲ್ಲಿ ವಿವಿಧ ಸೌಲಭ್ಯಗಳು ಇವೆ ಎಂಬುದನ್ನು ಪತ್ತೆ ಹಚ್ಚಿ ಮಾಹಿತಿ ವಿಂಗಡಿಸಿಡುವ ಮತ್ತು ಅದನ್ನು ಶೀಘ್ರವಾಗಿ ತಿಳಿಸುವ ವ್ಯವಸ್ಥೆಗಳನ್ನು ಮಾಡುವುದು.
- ಕೋವಿಡ್‌ನಿಂದಾಗಿ ಅನಾಥ ಅಥವಾ ಅರೆ ಅನಾಥ ಮಕ್ಕಳನ್ನು ಗುರುತಿಸಿ ಮಕ್ಕಳ ಯಾವುದೇ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಿಸಿ ಪುನರ್ವಸತಿ ಯೋಜನೆಗಳನ್ನು ಮಾಡುವುದು.
- ಹೋರಾಟದಲ್ಲಿ ನೀವೂ ಕೈ ಜೋಡಿಸಬಹುದು. ನೀವು ಸ್ವಯಂಸೇವಕರಾಗಲು ಇಚ್ಛಿಸಿದಲ್ಲಿ ಈ ಮುಂದಿನ ಲಿಂಕ್ ಮೂಲಕ ದಾಖಲಾಗಬಹುದು. ಜಾಲತಾಣ: icps.karnataka.gov.in ಕೊಂಡಿ: Link: https://bit.ly/33veor5

## ಆಗಬೇಕಿರುವುದಿನ್ನೂ ಸಾಕಷ್ಟಿದೆ

ಈಗಿರುವ ಸಮಸ್ಯೆಯ ಸ್ವರೂಪ ಎಷ್ಟು ಸವಾಲಿನದ್ದಾಗಿದೆ ಎಂದರೆ ಎಷ್ಟು ಮುಂದಾಲೋಚನೆಯಿಂದ ಕೆಲಸ ಮಾಡಿದರೂ ಕಡಿಮೆಯೇ. ಹಾಗಾಗಿ ಮಾಡಿರುವ, ಮಾಡುತ್ತಿರುವ ಕೆಲಸಗಳಂತೆಯೇ ಮಾಡಬೇಕಾಗಿರುವ ಕೆಲಸಗಳ ಪಟ್ಟಿಯೂ ದೊಡ್ಡದೇ ಇದೆ.

- ಎಲ್ಲ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಔಷಧಿ ಅಂಗಡಿಗಳು ಮತ್ತು ಪೊಲೀಸ್ ಠಾಣೆಗಳಲ್ಲಿ 'ಚೈಲ್ಡ್‌ಲೈನ್ 1098 ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ

